ಶ್ರೀ ವಾಟಾಳ್ ನಾಗರಾಜ್ :- ಮೆನನ್ ಅನ್ನು ಯಾವ ಕಾರಣಕ್ಕೂ ಬಿಡಕೂಡದು. ಕರ್ನಾಟಕದವರನ್ನು ಯಾರು ಬೇಕಾದರೂ ಇಡಿ.

ಅಧ್ಯಕ್ಷರು :- ಅದು ಸರಿಯಪ್ಪಾ. ಆದರೆ ಮಾನ್ಯ ಸಚಿವರು ತಾನೆ ಅದಕ್ಕೆ ಉತ್ತರ ಹೇಳಬೇಕು? ಅವರು ಸುಮ್ಮನೇ ಕುಳಿತುಬಿಟ್ಟಿದ್ದಾರಲ್ಲ.

ಶ್ರೀ ಬಿ. ಶ್ರೀರಾಮುಲು :- ಈಗಾಗಲೇ ಇಷ್ಟು ಬೇಗ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರವೇ ನಾನು ನಿಮ್ಮ ಮಾತಿಗೆ ಗೌರವ ಕೊಡುತ್ತೇನೆ. ಕನ್ನಡಿಗರಿಗೆ ಅವಮಾನ ಆಗದ ಹಾಗೆ ನಾನು ನೋಡಿಕೊಳ್ಳುತ್ತೇನೆ. ನಾನು ಇದಕ್ಕೆ ಸಂಬಂಧಪಟ್ಟ ಫೈಲ್‌ನ್ನು ತರಿಸಿಕೊಂಡು ಪರಿಶೀಲನೆ ಮಾಡಿ ಕನ್ನಡಿಗರಿಗೆ ಅವಮಾನವಾಗದ ಹಾಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

4. ಗಮನ ಸೆಳೆಯುವ ಸೂಚನೆಗಳು

ವಿಷಯ :- **ಉಡುಪಿ ನಗರಸಭಾ ವ್ಯಾಪ್ತಿಯ ಒಳಚರಂಡಿ ಕಾಮಗಾರಿಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ .**

ಅಧ್ಯಕ್ಷರು :- ಓಲೇಕಾರ್ ನೆಹರು ಚನ್ನಬಸಪ್ಪನವರೆ ನಿಮ್ಮ ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟಂತೆ ಉತ್ತರಿಸಲು ಮಾನ್ಯ ಸಚಿವರು ಒಂದು ವಾರಗಳ ಕಾಲ ಸಮಯವನ್ನು ತೆಗೆದುಕೊಂಡಿದ್ದಾರೆ. ಅವರು ಈ ಬಗ್ಗೆ ಬಂದಾಗ ಹೇಳುತ್ತಾರೆ.

ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ :- ಮಾನ್ಯ ಅಧ್ಯಕ್ಷರೆ, ಹಿಂದಿನ ಅಧಿವೇಶನದಲ್ಲಿಯೂ ಕೂಡ ಈ ವಿಚಾರದ ಬಗ್ಗೆಯೇ ಗಮನ ಸೆಳೆಯುವ ಸೂಚನೆ ಮೂಲಕ ಪ್ರಶ್ನೆ ಹಾಕಿದ್ದಾಗ ಆಗಲೂ ಕೂಡ ಇದಕ್ಕೆ ಉತ್ತರ ಬರಲಿಲ್ಲ. ಇಲ್ಲಿ ಸಾಕಷ್ಟು ಅವ್ಯವಹಾರವಾಗಿದೆ. ಸುಮಾರು ಏಳೆಂಟು ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ.

ಅಧ್ಯಕ್ಷರು :- ಮಾನ್ಯ ಸಚಿವರು ನನಗೆ ಏನು ಮನವಿ ಮಾಡಿಕೊಂಡಿದ್ದಾರೆಂದರೆ, ಈ ವಿಷಯವಾಗಿ ಕೆಲವು ಮುಖ್ಯವಾದ ಮಾಹಿತಿಗಳನ್ನು ಸಂಗ್ರಹಿಸಬೇಕಾಗಿರುವುದರಿಂದ ಇದಕ್ಕೆ ಉತ್ತರಿಸಲು ದಯಮಾಡಿ ಒಂದು ವಾರ ಕಾಲಾವಕಾಶ ಕಲ್ಪಿಸಬೇಕಾಗಿ ಕೋರುತ್ತೇನೆ ಎಂದಿದ್ದಾರೆ. ಆ ಪ್ರಕಾರ ನಿಮಗೆ

ಇನ್ನು ಒಂದು ವಾರದಲ್ಲಿ ಉತ್ತರವನ್ನು ಕೊಡಿಸೋಣ. ಈಗ ಕುಳಿತುಕೊಳ್ಳಿ, ಈಗ ರಘುಪತಿ ಭಟ್‌ರವರು ಗಮನ ಸೆಳೆಯಬೇಕು.

ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ :– ಮಾನ್ಯ ಅಧ್ಯಕ್ಷರೇ, ಈಗಾಗಲೇ ಅದರ ಆಡಿಟ್ ರಿಪೋರ್ಟ್ ಸರ್ಕಾರದಲ್ಲಿಯೇ ಇದೆ. ಇಲಾಖೆಯ ಕಾರ್ಯದರ್ಶಿಗಳು ಏನು ಮಾಡುತ್ತಿದ್ದಾರೆ? ಅಲ್ಲಿ ಅಧಿಕಾರಿಗಳು ಕೌರವರ ಸೈನ್ಯದಲ್ಲಿದಷ್ಟಂತೆ ಇದ್ದಾರೆ. ಆ ಸೈನ್ಯ ಏನು ಮಾಡುತ್ತಿದೆ? ಇನ್ನೂ ಉತ್ತರವನ್ನು ಏಕೆ ಕಳುಹಿಸಿಲ್ಲ? ಏಕೆಂದರೆ ಅಲ್ಲಿ ಸಾಕಷ್ಟು ಅವ್ಯವಹಾರವಾಗಿದೆ. ಆ ವ್ಯವಹಾರಗಳ ಬಗ್ಗೆ ತನಿಖೆಯಾಗಬೇಕು.

ಅಧ್ಯಕ್ಷರು :– ಆಯಿತು. ಈಗಾಗಲೇ ಅದನ್ನು ಹೇಳಿದ್ದೀರಿ. ಈಗ ಮತ್ತೆ ಅದನ್ನೇ ಹೇಳಿದರೆ ಹೇಗೆ? ಮಂತ್ರಿಗಳು ಉತ್ತರಿಸಲು ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ :– ಮಾನ್ಯ ಅಧ್ಯಕ್ಷರೆ, ಯಾವಾಗ ಇದರ ಬಗ್ಗೆ ಉತ್ತರವನ್ನು ಕೊಡಿಸುತ್ತೀರಿ ಹೇಳಿ.

ಅಧ್ಯಕ್ಷರು :– ಒಂದು ವಾರಗಳ ಕಾಲಾವಕಾಶವನ್ನು ಅವರು ಕೇಳಿದ್ದಾರೆ. ಒಂದು ವಾರದಲ್ಲಿ ನಿಮಗೆ ಉತ್ತರವನ್ನು ಕೊಡಿಸುತ್ತೇನೆ. ದಯಮಾಡಿ ಈಗ ಕುಳಿತುಕೊಳ್ಳಿ.

ಓಲೇಕಾರ್ ನೆಹರು ಚನ್ನಬಸಪ್ಪ :– ಒಂದು ವಾರಗಳ ಕಾಲ ಸಮಯಾವಕಾಶ ಕೇಳಿದರೆ ಹೇಗೆ ಹೇಳಿ. ಸುಮಾರು ಏಳೆಂಟು ಕೋಟಿ ರೂಪಾಯಿಗಳ ಅವ್ಯವಹಾರ ಅಲ್ಲಿ ನಡೆದಿದೆ. ಆ ಅವ್ಯವಹಾರಗಳನ್ನು ಬಯಲಿಗೆ ಎಳೆಯಬೇಕು ಎಂದರೆ ಅದಕ್ಕೂ ಒಂದು ವಾರಗಳ ಕಾಲ ಸಮಯಾವಕಾಶ ಕೇಳುತ್ತಾರೆ ಎಂದರೆ ಹೇಗೆ?

ಅಧ್ಯಕ್ಷರು :– ಆಯಿತು. ಒಂದು ವಾರಗಳ ಸಮಯವನ್ನು ಅವರು ಕೇಳಿದ್ದಾರೆ. ಅಷ್ಟರೊಳಗೆ ನಿಮಗೆ ಉತ್ತರ ಕೊಡಿಸೋಣವೆಂದರೆ ನೀವು ಮತ್ತೆ ಮತ್ತೆ ಅದನ್ನೇ ಹೇಳುತ್ತಿದ್ದೀರಲ್ಲ.

ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ :– ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ಉತ್ತರ ಕೊಡುವುದನ್ನೇ ಮುಚ್ಚಿಹಾಕುತ್ತಿದ್ದಾರೆ. ಆದುದರಿಂದ ನಾನು ಈ ಬಗ್ಗೆ ಈಗಲೇ ಉತ್ತರವನ್ನು ಕೊಡಿಸಿ ಎಂದು ಹೇಳುತ್ತಿರುವುದು.

ಶ್ರೀ ಕೆ. ರಘುಪತಿ ಭಟ್ :– ಮಾನ್ಯ ಅಧ್ಯಕ್ಷರೆ, ಪೌರಾಡಳಿತ ಸಚಿವರ ಬಳಿ ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ಎ.ಡಿ.ಬಿ. ಸಾಲದ ಮೂಲಕ

ನಡೆಯುತ್ತಿರುವಂಥ ಕುಡ್ಸೆಂಪ್ ಯೋಜನೆ ನಿಧಾನಗತಿಯಲ್ಲಿ ನಡೆದಿದೆ. ಈಗಾಗಲೇ ಟೆಂಡರ್ ಕರೆದು ಅವಧಿ ಮುಗಿದಾಗಿದೆ. ಆದರೂ ಕೆಲಸಗಳು ಸಂಪೂರ್ಣವಾಗಿಲ್ಲ. ಅದರಲ್ಲಿಯೂ ವಿಶೇಷವಾಗಿ ಒಳಚರಂಡಿಯ ವ್ಯವಸ್ಥೆಯಲ್ಲಿ ಈಗಾಗಲೇ ಆ ಗುತ್ತಿಗೆದಾರ ಕೂಡ ಕೈ ಎತ್ತುವಂಥ ಕೆಲಸವನ್ನು ಮಾಡಿದ್ದಾನೆ. ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ನನಗೆ ಇದರ ಬಗ್ಗೆ ಉತ್ತರ ಬಂದಿಲ್ಲ. ಆದುದರಿಂದ ನೀವು ಅವರಿಗೆ ನನಗೆ ಉತ್ತರವನ್ನು ಒದಗಿಸುವಂತೆ ಹೇಳಿ.

ಶ್ರೀ ಆಲಂಗೂರು ಶ್ರೀನಿವಾಸ್ (ಪೌರಾಡಳಿತ ಸಚಿವರು) :– ಮಾನ್ಯ ಅಧ್ಯಕ್ಷರೆ, ಉಡುಪಿಯಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ವಿಳಂಬವಾಗಿದೆ. ಈಗಾಗಲೇ ಇದಕ್ಕೆ ಸಂಬಂಧಪಟ್ಟಂತೆ ಮೂರು ವಿಭಾಗಗಳನ್ನಾಗಿ ಮಾಡಿ ಟೆಂಡರ್‌ನ್ನು ಕರೆಯಲಾಗಿದೆ. ಅವರ ಅವಧಿ ಪ್ರಕಾರ ಕೆಲಸ ಪ್ರಾರಂಭವಾಗಿರುವುದು 27–10–2003 ರಲ್ಲಿ. ಅವರು ಕೆಲಸವನ್ನು ಪೂರ್ಣಗೊಳಿಸಬೇಕಾಗಿರುವುದು 31–12–2007 ರೊಳಗೆ. ಆದರೆ ಗೌರವಾನ್ವಿತ ಸದಸ್ಯರು ಹೇಳತಕ್ಕಂಥ ರೀತಿಯಲ್ಲಿ ಇದುವರೆಗೂ ಕೂಡ ಕೆಲಸವನ್ನು ಸರಿಯಾದ ರೀತಿಯಲ್ಲಿ ಪ್ರಾರಂಭ ಮಾಡಿಲ್ಲ ಮತ್ತು ಪೂರ್ಣಗೊಳಿಸಿಲ್ಲ, ಆ ಕಾಮಗಾರಿ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸುತ್ತಿಲ್ಲ, ಪುನರ್ ಟೆಂಡರ್ ಕರೆಯುವುದು ಒಳ್ಳೆಯದು ಎಂದು ಗೌರವಾನ್ವಿತ ಸದಸ್ಯರು ತಿಳಿಸಿದ್ದಾರೆ. ಬಹುಶಃ ಇದರ ಬಗ್ಗೆ ಅಲ್ಲಿನ ನಮ್ಮ ಉಸ್ತುವಾರಿ ಮಂತ್ರಿಗಳು ಮತ್ತು ಗೌರವಾನ್ವಿತ ಸದಸ್ಯರು ಏನು ತೀರ್ಮಾನವನ್ನು ತೆಗೆದುಕೊಂಡಿದ್ದಾರೋ ಆ ತೀರ್ಮಾನದ ಪ್ರಕಾರ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಕೆ. ರಘುಪತಿ ಭಟ್ :– ಮಾನ್ಯ ಅಧ್ಯಕ್ಷರೆ, ಇಲ್ಲಿ ಸರ್ಕಾರದಿಂದ ಉತ್ತರ ಬರುವಾಗ ಕೆಲವು ತಪ್ಪುಗಳಾಗಿವೆ, ಏನೆಂದರೆ ಉಡುಪಿ ನಗರಸಭೆಯಲ್ಲಿ ಸುಮಾರು 128 ಕೋಟಿ ರೂಪಾಯಿಗಳ ಎ.ಡಿ.ಬಿ. ಸಾಲದಲ್ಲಿ ಕುಡ್ಸೆಂಪ್ ಎಂದು ಯೋಜನೆ ಆಗುತ್ತಿದೆ. ಇದು ನಿಜವಾಗಿ ವಿಸ್ತರಣೆ ಮಾಡಿದ್ದು 31–12–2007 ರ ವರೆಗೆ ಈ ಕಾಮಗಾರಿ ಯೋಜನೆಯ ಅವಧಿಯಲ್ಲಿ ಈಗ ವಿಸ್ತರಣೆ ಮಾಡಿದ್ದಾರೆ. ನಿಜವಾಗಿ ಹೇಳಬೇಕೆಂದರೆ ಇದರ ಅವಧಿ 2006 ನೇ ಇಸವಿಯಲ್ಲಿಯೇ ಮುಗಿದಿದೆ. 2006 ನೇ ಇಸವಿಗೆ ಅವಧಿ ಮುಗಿದದ್ದನ್ನು ಮತ್ತೆ ಇಲಖೆಯ ಅಧಿಕಾರಿಗಳು ಅವಧಿಯನ್ನು ವಿಸ್ತರಣೆ ಮಾಡಿದ್ದಾರೆ. ಹೊರತು ಮೊದಲಿನ ಟೆಂಡರ್ ಕಂಡೀಶನ್ ಪ್ರಕಾರ ಅವರಿಗೆ 2007 ರವರೆಗೆ ಅವಕಾಶ ಇರಲಿಲ್ಲ. ಬೇರೆಲ್ಲಾ

ಕೆಲಸಗಳು, ಅಂದರೆ ಕುಡಿಯುವ ನೀರಿನ ಯೋಜನೆಗಳಿಗೆ ಸಂಬಂಧ ಪಟ್ಟಂತೆ ಮಾಡಬೇಕಾದ ಕೆಲಸಗಳು ಸಾಧರಣವಾಗಿ, ಸಮಾಧಾನಕರವಾದಂಥ ರೀತಿಯಲ್ಲಿ ಆಗಿವೆ. ಆದರೆ ನಮಗೆ ಬಹಳ ಸಮಸ್ಯೆ ಇರುವಂಥದ್ದು ಯಾವುದೆಂದರೆ, ಒಳಚರಂಡಿಯ ವ್ಯವಸ್ಥೆ. ಈ ಒಳಚರಂಡಿ ವ್ಯವಸ್ಥೆ ಅಲ್ಲಿ ಏನಾಗಿದೆಯೆಂದು ನಮ್ಮ ಸಚಿವರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತರಬಯಸುತ್ತೇನೆ. ಉಡುಪಿ ನಗರಸಭೆಯ ವ್ಯಾಪ್ತಿಯಲ್ಲಿ 34 ಕೋಟಿ ರೂಪಾಯಿಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಮಾಡಿದ್ದಾರೆ. ಹಣ ಖರ್ಚಾಗಿದೆ. ಆದರೆ ಒಂದೇ ಒಂದು ಚೂರು ಕೂಡ ಅದರಿಂದ ಉಪಯೋಗವಾಗಲಿಲ್ಲ. ಇವೊತ್ತು ಎಸ್.ಟಿ.ಪಿ.ವರರಿಗೆ ಆ ಡ್ರೈನೇಜ್‌ನ ನೀರು ಸಹಿತ ಹೋಗುವಂಥ ವ್ಯವಸ್ಥೆ ಇಲ್ಲ. ಉಡುಪಿ ನಗರಸಭೆ ವ್ಯಾಪ್ತಿಯಲ್ಲಿ ದೊಡ್ಡ ಸಮಸ್ಯೆಯೇ ಒಳಚರಂಡಿಯದಾಗಿತ್ತು. ಆದರೆ ಆ ಯೋಜನೆ ಬಂದಂಥದ್ದು ಕಾರ್ಯರೂಪಕ್ಕೆ ಬರುತ್ತಿಲ್ಲ. ಇವೊತ್ತು ನಾವು ಗುತ್ತಿಗೆದಾರರನ್ನು ಕೇಳಿದರೆ, ಈ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ, ಸಾರ್ ಗುತ್ತಿಗೆದಾರರಿಗೆ ಟೆಂಡರ್‌ನಿಂದ ಲಾಸ್ ಆಗಿದೆಯಾದ ಕಾರಣ ಮಾಡುವುದಿಲ್ಲವೆಂದು ಹೇಳುತ್ತಾರೆ. ಆದುದರಿಂದ ಕಳೆದ ಮೂರು ವರ್ಷಗಳಿಂದ ಒಳಚರಂಡಿ ವ್ಯವಸ್ಥೆ ಸರಿ ಇಲ್ಲದೇ ಬಹಳ ಗಂಭೀರವಾದ ಸಮಸ್ಯೆ ಉಂಟಾಗಿದೆ. ನಮ್ಮ ನಗರಸಭೆ ವ್ಯಾಪ್ತಿಯ ಪ್ರಮುಖ ರಸ್ತೆಗಳು, ಪಿಡಬ್ಲ್ಯೂಡಿಯ ಎಂ.ಡಿ.ಆರ್ ರಸ್ತೆಗಳು, ಸ್ಟೇಟ್ ಹೈವೇಗಳನ್ನು 24 ಫೀಟ್ ರಸ್ತೆ ಅಗೆದು, ಇವರು ಮತ್ತೆ ಪುನರ್ ಡಾಂಬರೀಕರಣ ಮಾಡಲಿಲ್ಲ ಮತ್ತು ಅಲ್ಲಿ ಹೊಂಡಗಳನ್ನು ಕೂಡ ಮುಚ್ಚುವಂಥ ಕೆಲಸವನ್ನು ಉವರು ಮಾಡಲಿಲ್ಲ. ಪ್ರಮುಖವಾಗಿ ಕುಂದಾಪುರದಿಂದ ಉಡುಪಿಗೆ ಬರುವಂಥ ಗುಂಡಿಬೇಲ್ ರಸ್ತೆ ಎಂದು ಹೇಳುವಂಥದ್ದೇನಿದೆ ಅದು ಕಳೇದ ಮೂರು ವರ್ಷದಿಂದ ಬಂದ್ ಆಗಿದೆ. ಕಾರಣ ಏನು ಎಂದರೆ, ಒಳಚರಂಡಿಗೋಸ್ಕರ 24 ಫೀಟ್ ರಸ್ತೆಯನ್ನು ಅಗೆದಿದ್ದಾರೆ. ಅದಕ್ಕೆ ಮತ್ತೆ ಮರು ಡಾಂಬರೀಕರಣ ಮಾಡುವಂಥದ್ದನ್ನು, ಗುಂಡಿ ಮುಚ್ಚುವಂಥ ಕೆಲಸವನ್ನು ಮಾಡಿಲ್ಲ. ಈ ಬಗ್ಗೆ ನಮ್ಮ ಅಧಿಕಾರಿಗಳ ಹತ್ತಿರ ಕೇಳಿದರೆ, ಆ ಟೆಂಡರ್‌ದಾರರಿಗೆ ಲಾಸ್ ಆಗಿದೆ ಸಾರ್, ಅವರು ಕೆಲಸವನ್ನು ಮಾಡುವುದಿಲ್ಲವೆಂದು ಹೇಳುತ್ತಾರೆ. ಇಲ್ಲಿ ಬೇರೆಯವರ ಹತ್ತಿರ ಕೆಲಸ ಮಾಡಿಸುವಂಥ ವ್ಯವಸ್ಥೆಯೂ ಕೂಡ ಇಲ್ಲ. ನನಗೆ ಉತ್ತರದಲ್ಲಿ ಏನು ಹೇಳಿದ್ದಾರೆಂದರೆ ಮಣಿಪಾಲದಲ್ಲಿ ಸ್ಥಳ ಕೊಡದಿದ್ದರಿಂದ ಇದು ಬಿಟ್ಟುಹೋಗಿದೆ ಎಂದು ಹೇಳಿ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ, ಮಣಿಪಾಲ ಇವೊತ್ತು ಬೆಳೆಯುತ್ತಿರುವಂಥ ನಗರ. ಸಾಕಷ್ಟು ಬಹುಮಹಡಿ ಕಟ್ಟಡಗಳು ಬರುತ್ತಿರುವಂಥ ಪ್ರದೇಶದಲ್ಲಿ ಇವೊತ್ತು ಒಳಚರಂಡಿ ವ್ಯವಸ್ಥೆಯಿಲ್ಲ. ಎಲ್ಲಾ ಒಳಚರಂಡಿಯ ನೀರನ್ನು ನಗರದ ಪ್ರಮುಖ

ರಸ್ತೆಗಳಲ್ಲಿ ಜನ ಪ್ಲಾಟ್‌ಗಳ ಮುಖಾಂತರ ಬಿಟ್ಟಿದ್ದಾರೆ. ಜನ ಗಲಾಟೆ ಮಾಡುತ್ತಿದ್ದಾರೆ. ಒಳಚರಂಡಿ ವ್ಯವಸ್ಥೆ ಮಾಡಿ ಎಂದರೆ, ಆ ಗುತ್ತಿಗೆದಾರನ ಲೋಪದಿಂದಾಗಿ ಆ ಕೆಲಸವಾಗಿಲ್ಲವೆನ್ನುವುದನ್ನು ಬಿಟ್ಟರೆ, ಜಿಲ್ಲಾಧಿಕಾರಿಗಳಾಗಲೀ ಅಥವಾ ಅಲ್ಲಿಯ ನಗರಸಭೆಯಾಗಲೀ ಸ್ಥಳ ಕೊಡದೇ ಇದ್ದದ್ದರಿಂದ ಇದು ಆಗಿರುವಂಥದ್ದಲ್ಲ. ಅಧಿಕಾರಿಗಳು ಕೊಟ್ಟಿರುವುದು ತಪ್ಪು ಮಾಹಿತಿ. ಆದುದರಿಂದ ಇವೊತ್ತು ನಮ್ಮ ಬೇಡಿಕೆ ಏನೆಂದರೆ, ಹಿಂದಿನ ಗುತ್ತಿಗೆದಾರ ಕೆಲಸ ಮಾಡದಿದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಿ. ಈಗ ತಕ್ಷಣ ಹೊಸದಾಗಿ ಟೆಂಡರ್ ಕರೆದು ಒಳಚರಂಡಿ ವ್ಯವಸ್ಥೆಯನ್ನು ಅಲ್ಲಿ ಸರಿಯಾಗಿ ಮಾಡಿಸಬೇಕು. ಇವೊತ್ತು ನನಗೆ ಕೊಟ್ಟಿರುವ ಉತ್ತರದಲ್ಲಿ ನಾವು ಕೈಬಿಟ್ಟಿದ್ದೇವೆಂದು ಬರೆದಿದ್ದಾರೆ. ಕೈ ಬಿಟ್ಟಿದ್ದೇವೆಂದು ಹೇಳಿದರೆ, ಈಗೇನು 34 ಕೋಟಿ ರೂಪಾಯಿಗಳನ್ನು ಒಳಚರಂಡಿ ವ್ಯವಸ್ಥೆಗೆಂದು ಇಟ್ಟಿದ್ದಾರೆ ಅದು ಒಂದು ಚೂರು ಪ್ರಯೋಜನವಾಗುವುದಿಲ್ಲ. ಅಷ್ಟೂ ಹಣ ಹಾಕಿದ್ದು ನೀರನಲ್ಲಿ ಹೋಮ ಮಾಡಿದಂತಾಗುತ್ತದೆ. ಅದನ್ನು ಬಿಟ್ಟರೆ ಮತ್ತೇನೂ ಆದಂತಾಗುವುದಿಲ್ಲ. ನಮಗೆ ಎಸ್.ಟಿ.ಪಿ. ಕಟ್ಟಿದ್ದಾರೆ. ಆ ಎಸ್.ಟಿ.ಪಿ. ಯೊಳಗೆ ಒಳಚರಂಡಿ ನೀರು ಬರುವಂಥ ವ್ಯವಸ್ಥೆಯಿಲ್ಲ. ಆ ಪೈಪ್‌ನ್ನು ಸರಿಯಾಗಿ ಹಾಕುವಂಥ ವ್ಯವಸ್ಥೆಯಾಗಿಲ್ಲ. ಕಳಪೆ ಗುಣಮಟ್ಟದ ಗುತ್ತಿಗೆದಾರನಿಂದಾಗಿ ಈ ರೀತಿ ಕೆಲಸವಾಗಿದೆ.

ಅಧ್ಯಕ್ಷರು :– ಮಾನ್ಯ ಸದಸ್ಯರೇ ಗಮನ ಸೆಳೆಯುವ ಸೂಚನೆಯಲ್ಲಿ ಸದನದಲ್ಲಿ ಕಥೆ ಹೇಳಿದಂತೆ ಹೇಳುವುದಕ್ಕೆ ಅವಕಾಶವಿಲ್ಲ.

ಶ್ರೀ ರಘುಪತಿ ಭಟ್ :– ಸರ್ಕಾರ ತನ್ನ ಉತ್ತರದಲ್ಲಿ ಇದನ್ನು ಕೈಬಿಟ್ಟಿದ್ದೇವೆಂದು ಹೇಳಿದ್ದಾರೆ. ಇದನ್ನು ಕೈಬಿಡುವುದಕ್ಕೆ ಆಗುವುದಿಲ್ಲ. ಅದೇ ಹಣದಲ್ಲಿ ಮತ್ತೆ ಪುನಃ ರೀ–ಟೆಂಡರ್ ಕರೆದು ಆ ಕಾಮಗಾರಿಗಳನ್ನು ಮಾಡಿಸಬೇಕು. ಇಲ್ಲದಿದ್ದರೆ ಇಷ್ಟೂ ಹಣ ಹಾಕಿದ್ದು ವೇಸ್ಟ್ ಆಗುತ್ತದೆ. ಈ ಗಂಭೀರತೆಯನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಆಲಂಗೂರು ಶ್ರೀನಿವಾಸ್ :– ಮಾನ್ಯ ಅಧ್ಯಕ್ಷರೆ, ಈಗಾಗಲೇ ಕೊಳಚೆ ನೀರು ಶುದ್ಧೀಕರಣ ಘಟಕದ್ದು 85% ಕಾಮಗಾರಿ ಕೆಲಸ ಪೂರ್ತಿಯಾಗಿದೆ. ಒಳಚರಂಡಿ ವ್ಯವಸ್ಥೆ ನವೀಕರಣದ್ದು 52% ನಷ್ಟು ಒಂದು ಘಟಕದಲ್ಲಾಗಿದೆ. ಇನ್ನೊಂದು 49% ಆಗಿದೆ. ಬಹುಶಃ ಇದು ತಡ ಆಗಿದ್ದರೂ ಕೂಡ ಆ ಗುತ್ತಿಗೆದಾರರನ್ನು ಮತ್ತು ಸಂಬಂಧಪಟ್ಟ ಅಧಿಕಾರಿಯನ್ನು ಸೇರಿಸಿ, ಸದಸ್ಯರೆಲ್ಲರನ್ನೂ ಸಹಿತ ಒಟ್ಟಿಗೆ

ಸೇರಿಸಿ, ಈಗಾಗಲೇ ಕೊಟ್ಟಿರತಕ್ಕಂಥ ಅವಧಿಯೊಳಗೆ ಕಾಮಗಾರಿಯನ್ನು ಪೂರ್ತಿಗೊಳಿಸುತ್ತೇನೆಂದು ಆ ಗುತ್ತಿಗೆದಾರ ಹೇಳಿದರೆ ಅವರನ್ನೇ ಮುಂದುವರಿಸೋಣ. ಇಲ್ಲದೇ ಇದ್ದ ಪಕ್ಷದಲ್ಲಿ ಪುನರ್ ಟೆಂಡರ್ ಕರೆದು ಬೇರೆಯವರಿಗೆ ಕೊಡತಕ್ಕಂಥ ವ್ಯವಸ್ಥೆ ಮಾಡೋಣ.

ಅಧ್ಯಕ್ಷರು :– ಮಾನ್ಯ ಸದಸ್ಯರ ಬೇಡಿಕೆ ಕೂಡ ಅದೇ ಆಗಿದೆಯಲ್ಲ. ಈಗ ಶಾಸನ ರಚನೆ.

ಶ್ರೀ ರಘುಪತಿ ಭಟ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು 49% ಆಗಿದೆಯೆಂದು ಹೇಳಿದ್ದಾರೆ.

ಅಧ್ಯಕ್ಷರು :– ಅವರು ಈಗಾಗಲೇ ವರುಷದ ಕೊನೆಯೊಳಗೆ ಮಾಡುತ್ತೇವೆಂದು ಹೇಳಿದ್ದಾರಲ್ಲ.

ಶ್ರೀ ಕೆ. ರಘುಪತಿ ಭಟ್ :– ಮಾನ್ಯ ಅಧ್ಯಕ್ಷರೆ, ಅಲ್ಲಿ ರಸ್ತೆಗಳಲ್ಲಿ ವಾಹನ ಹೋಗುವುದಕ್ಕೂ ಆಗದಂಥ ಪರಿಸ್ಥಿತಿ ಇದೆ.

ಶ್ರೀ ಆಲಂಗೂರು ಶ್ರೀನಿವಾಸ್ :– ಮಾನ್ಯ ಸದಸ್ಯರೆ ನೀವೂ ಮತ್ತು ನಾವು ಕುಳಿತುಕೊಳ್ಳೋಣ. ಅವರನ್ನು ಕೂಡ ನಾನು ಕರೆಸುತ್ತೇನೆ. ಇದರ ಬಗ್ಗೆ ಯಾವ ರೀತಿಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು, ಆ ಗುತ್ತಿಗೆದಾರನೇ ಏನಾದರೂ ಕಾಮಗಾರಿ ಕೆಲಸವನ್ನು ಮುಂದುವರೆಸುತ್ತಾನೆಯೇ ಅವನಿಗೆ ಕೊಟ್ಟಿರತಕ್ಕಂಥ ಅವಧಿಯೊಳಗೆ ಮಾಡುವುದಾಗಿ ಅವನು ಭರವಸೆಯನ್ನು ಕೊಟ್ಟರೆ ಪುನಃ ಅವನಿಗೇ ಕೊಡೋಣ. ಇಲ್ಲದೇ ಇದ್ದ ಪಕ್ಷದಲ್ಲಿ ಬೇರೆಯವರಿಗೆ ಕೊಡುವುದಕ್ಕೆ ರೀ–ಟೆಂಡರ್ ಕರೆಯೋಣ. ನೀವೂ ಮತ್ತು ನಾವು ಕುಳಿತು ಇದರ ಬಗ್ಗೆ ಸಮಾಲೋಚನೆ ಮಾಡೋಣ.

ಶ್ರೀ ಕೆ. ರಘುಪತಿ ಭಟ್ :– ಮಾನ್ಯ ಸಚಿವರೇ, ತಾವು ಸಭೆ ಕರೆದು ರೀ–ಟೆಂಡರ್ ಕರೆಯುವ ಹಾಗೆ ಮಾಡಿ.